**ಕರ್ನಾಟಕ ಸರ್ಕಾರ**

ಸಂಖ್ಯೆ: ನಅಇ 61 ಎಂಎನ್ಇ 2020(ಭಾ2)(ಇ-ಕಡತ)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸಸೌಧ
ಬೆಂಗಳೂರು, ದಿನಾಂಕ:22/05/2020

**ಸುತ್ತೋಲೆ**

**ವಿಷಯ:** ನಗರ ಸ್ಥಳೀಯ ಸಂಸ್ಥೆಗಳು ವಿಧಿಸುವ ಆಸ್ತಿ ತೆರಿಗೆ ಮೇಲಿನ ಶೇ. 5%ರ ರಿಯಾಯಿತಿ ಮತ್ತು ಪಾವತಿ ವಿಳಂಬ ದಂಡ ವಿಧಿಸುವ ಅವಧಿ ವಿಸ್ತರಣೆ ಬಗ್ಗೆ.

**ಉಲ್ಲೇಖ:**
1) ಕರ್ನಾಟಕ ಮಹಾನಗರಪಾಲಿಕೆಗಳ ಅಧಿನಿಯಮ 1976ರ ಕಲಂ. 112(ಎ)(1) ಮತ್ತು 112(ಎ)(5).
2) ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ಕಲಂ 105(1) ಮತ್ತು 105(8).
3) ಸುತ್ತೋಲೆ ಸಂಖ್ಯೆ: 19958 ಡಿಎಂಎ 22 ಡಿಎಂಐಎಸ್‌ಸಿ 2017-18, ದಿನಾಂಕ:07/04/2020.

***

ರಾಜ್ಯಾದ್ಯಂತ ಕೋವಿಡ್-19 ಸಾಂಕ್ರಾಮಿಕ ರೋಗದ ನಿಯಂತ್ರಣ ಸಂಬಂಧ ವಿಧಿಸಲಾಗಿರುವ ಲಾಕ್‌ಡೌನ್ ಹಿನ್ನೆಲೆಯಲ್ಲಿ, ಸಾರ್ವಜನಿಕರು ಸಾಮಾಜಿಕ ಅಂತರ ಮತ್ತು ಪ್ರತ್ಯೇಕತೆಗೆ ಹೆಚ್ಚಿನ ಗಮನ ಹರಿಸಬೇಕಾಗಿದ್ದು, ಸಂದರ್ಭೋಚಿತವಾಗಿ ಸಾರ್ವಜನಿಕರಿಗೆ ಅನುವಾಗುವಂತೆ ಕಾಯ್ದೆ / ನಿಯಮಗಳಲ್ಲಿ ಅಗತ್ಯ ಸಂಯೋಜನೆ ತರುವ ನಿಟ್ಟಿನಲ್ಲಿ ಉಲ್ಲೇಖ (1) ಮತ್ತು (2)ರ ಕಲಂಗಳಿಗೆ ಅಗತ್ಯ ತಿದ್ದುಪಡಿ ತರಬೇಕಾಗಿದ್ದು, ಸರ್ಕಾರದಿಂದ ಅಗತ್ಯ ಕ್ರಮ ವಹಿಸಲಾಗುತ್ತಿದೆ ಎಂದು ತಿಳಿಯಪಡಿಸಿದೆ.

ಪ್ರಸ್ತುತ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ (ಬಿ.ಬಿ.ಎಂ.ಪಿ ಹೊರತುಪಡಿಸಿ) ಉಲ್ಲೇಖ (1)ರ ಕಲಂ 112(ಎ)(1) ಮತ್ತು ಉಲ್ಲೇಖ (2)ರ ಕಲಂ 105(1) ಗಳಲ್ಲಿ ನಿಗಧಿಸಿರುವ ಆಸ್ತಿ ತೆರಿಗೆ ಪಾವತಿ ಮೇಲಿನ ಶೇ 5ರ ರಿಯಾಯಿತಿ ಕಾಲಾವಧಿಯನ್ನು ದಿನಾಂಕ:30/04/2020 ರ ಬದಲಾಗಿ ಉಲ್ಲೇಖ(3)ರ ಸುತ್ತೋಲೆಯಲ್ಲಿ ದಿನಾಂಕ:31/05/2020 ರವರೆಗೆ ವಿಸ್ತರಿಸಲಾಗಿದ್ದು, ಹಾಲಿ ಲಾಕ್‌ಡೌನ್ ವಿಸ್ತರಣೆಗೊಂಡಿರುವ ಹಿನ್ನೆಲೆಯಲ್ಲಿ ಸದರಿ ರಿಯಾಯಿತಿಯನ್ನು ದಿನಾಂಕ:31/07/2020 ರವರೆಗೂ ವಿಸ್ತರಿಸಲು ಕ್ರಮವಹಿಸುವಂತೆ ಸೂಚಿಸಿದೆ.

ಮುಂದುವರೆದು, ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ, ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ (ಬಿ.ಬಿ.ಎಂ.ಪಿ ಹೊರತುಪಡಿಸಿ) ಉಲ್ಲೇಖ (1)ರ ಕಲಂ 112(ಎ)(5) ಮತ್ತು ಉಲ್ಲೇಖ (2)ರ ಕಲಂ 105(8) ಗಳಲ್ಲಿ ನಿಗಧಿಪಡಿಸಿರುವಂತೆ, ಆಸ್ತಿ ತೆರಿಗೆ ಪಾವತಿ ಮೇಲಿನ ಪಾವತಿ ವಿಳಂಬ ದಂಡವನ್ನು ದಿನಾಂಕ:01/07/2020 ರಿಂದ ಅನ್ವಯಿಸುವ ಬದಲಾಗಿ ದಿನಾಂಕ:01/11/2020 ರಿಂದ ಅನ್ವಯಿಸಿ ವಿಧಿಸುವಂತೆ ಕ್ರಮವಹಿಸಲು ಸೂಚಿಸಿದೆ.

ಈ ಮೇಲ್ಕಂಡ ಸೂಚನೆಗಳು ಪ್ರಸಕ್ತ ಸಾಲಿಗೆ ಮಾತ್ರ ಅನ್ವಯವಾಗುತ್ತದೆ.

(ಡಾ॥ ಜೆ. ರವಿಶಂಕರ್)
ಸರ್ಕಾರದ ಕಾರ್ಯದರ್ಶಿಗಳು
ನಗರಾಭಿವೃದ್ಧಿ ಇಲಾಖೆ

**ಇವರಿಗೆ,**

1. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ವಿ.ವಿ.ಗೋಪುರ, ಬೆಂಗಳೂರು.
2. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
3. ರಾಜ್ಯದ ಎಲ್ಲಾ ಜಿಲ್ಲೆಗಳ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ.
4. ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ಆಯುಕ್ತರು/ಪೌರಾಯುಕ್ತರು/ಮುಖ್ಯಾಧಿಕಾರಿಗಳು } ಪೌರಾಡಳಿತ ನಿರ್ದೇಶಕರ ಮುಖಾಂತರ
5. ಜಂಟಿ ನಿರ್ದೇಶಕರು, (ಸುಧಾರಣೆ), ಕೆ.ಎಂ.ಡಿ.ಎಸ್ ರವರಿಗೆ ತಂತ್ರಾಂಶದಲ್ಲಿ ಅಗತ್ಯ ಕ್ರಮ ವಹಿಸಲು.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

Scanned with CamScanner